ಆ)	ವರ್ಷ	(ರೂ.ಕೋಟಿಗಳಲ್ಲಿ)
	1994-95	544.93
	1995-96	639.62
	1996-97 (ತಾತ್ಕಲಿಕ)	627.97

ಇ) ತೆರಿಗೆ ಸೋರುವಿಕೆಯನ್ನು ತಡೆಗಟ್ಟಲು ವಿವಿಧ ಕಾಯ್ದೆಗಳಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗಿದ್ದು ಮೊಬೈಲ್ ಚೆಕ್ ಪೋಸ್ಟ್‌ಗಳಲ್ಲಿ ಸರಕು ವಾಹನಗಳನ್ನು ಪರಿಶೀಲಿಸುವುದರ ಜೊತೆಗೆ ಅಂಗಡಿ ಹಾಗೂ ಮಳಿಗೆಗಳ ತಪಾಸಣೆಯನ್ನು ಗುಪ್ತವಾರ್ತೆ ವಿಭಾಗವು ಕೈಗೊಂಡಿರುತ್ತದೆ.

ವಿಷಯ: 1995-96 ಹಾಗೂ 96-97ನೇ ಸಾಲಿನಲ್ಲಿ ರಾಜ್ಯದಲ್ಲಿ ವಾಣಿಜ್ಯ ತೆರಿಗೆ ಸಂಗ್ರಹ.

2759 (4171)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿವರೆ?

ಅ) ರಾಜ್ಯದಲ್ಲಿ 1995-96, 1996-97ನೇ ಸಾಲುಗಳಲ್ಲಿ ವಾರ್ಷಿಕ ವಾಣಿಜ್ಯ ತೆರಿಗೆ ಸಂಗ್ರಹ ಎಷ್ಟು? (ಪ್ರತ್ಯೇಕ ವಿವರ ನೀಡುವುದು)

ಆ) ಈ ವರ್ಷಗಳಲ್ಲಿ ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಆಗಿರತಕ್ಕ ಏರುಪೇರುಗಳಿಗೆ ಕಾರಣಗಳೇನು? (ವಿವರ ನೀಡುವುದು)

ಇ) 1997-98ನೇ ಸಾಲುಗಳಲ್ಲಿ (ಜುಲೈ) 1998ರ ವರೆಗೆ ಎಷ್ಟು ತೆರಿಗೆ ಸಂಗ್ರಹಿಸಲಾಗಿದೆ ಹಾಗೂ 1997-98ನೇ ಸಾಲಿನಲ್ಲಿ ಎಷ್ಟು ತೆರಿಗೆ ಸಂಗ್ರಹಕ್ಕೆ ಗುರಿ ನಿಗದಿ ಪಡಿಸಲಾಗಿದೆ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):

ಅ) ಅಧಿನಿಯಮ	1995-96 (ಮಹಾಲೇಖಪಾಲರ ಲೆಕ್ಕದಂತೆ)	1996-97 (ತಾತ್ಕಲಿಕ ನಮೂನೆ-1 ರಂತೆ)
		(ರೂ. ಕೋಟಿಗಳಲ್ಲಿ)
ಮಾರಾಟ ತೆರಿಗೆ	2954.45	3672.85
ಮನರಂಜನಾ ತೆರಿಗೆ	45.05	32.16
ಕೃಷಿ ವರಮಾನ ತೆರಿಗೆ	49.78	39.04
ಪ್ರವೇಶ ತೆರಿಗೆ	168.34	201.45
ವೈಭವ ತೆರಿಗೆ	20.80	34.15
ಜೂಜು ತೆರಿಗೆ	13.46	11.70
ವೃತ್ತಿ ತೆರಿಗೆ	105.76	119.27
ಒಟ್ಟು :	3357.65	4110.63

ಅ) 1. **ಮಾರಾಟ ತೆರಿಗೆ:** ತೆರಿಗೆ ದರಗಳ ಸರಳೀಕರಣ ಅದರ ಪರಿಣಾಮವಾಗಿ ವರ್ತಕರಿಂದ ತೆರಿಗೆ ಪಾವತಿಯ ಹೆಚ್ಚುವರಿ ಅನುವರ್ತನೆ ಮತ್ತು ವ್ಯಾಪಾರ ವಹಿವಾಟುಗಳಿಂದಾಗಿ ಸಂಗ್ರಹಣೆ ಹೆಚ್ಚಳವಾಗಿದೆ.

2. **ಮನರಂಜನ ತೆರಿಗೆ:** 1-4-96 ರಿಂದ ಎಲ್ಲಾ ಕನ್ನಡ ಚಲನಚಿತ್ರಗಳಿಗೆ ಪೂರ್ಣ ತೆರಿಗೆ ವಿನಾಯಿತಿ ನೀಡಿದ್ದರಿಂದ ಸಂಗ್ರಹಣೆ ಕಡಿಮೆಯಾಗಿದೆ.

3. **ಪ್ರವೇಶ ತೆರಿಗೆ:** ತೆರಿಗೆ ದರಗಳ ಸರಳೀಕರಣ ಹಾಗೂ ಹೊರ ರಾಜ್ಯಗಳಿಂದ ಸ್ವಂತ ಉಪಯೋಗಕ್ಕಾಗಿ ವಾಹನಗಳನ್ನು ತರುವುದರ ಮೇಲೆ ತೆರಿಗೆ ವಿಧಿಸುವಿಕೆಯಿಂದಾಗಿ ಸಂಗ್ರಹಣೆಯಲ್ಲಿ ಹೆಚ್ಚಳ ಉಂಟಾಗಿದೆ.

4. **ಜೂಜು ತೆರಿಗೆ:** ಕಾಂಪೋಜಿಶನ್ ಸ್ಕೀಮ್ ಜಾರಿಯಿಂದ ಸಂಗ್ರಹಣೆ ಸ್ವಲ್ಪ ಕಡಿಮೆ ಆಗಿದೆ.

5. **ವೈಭವ ತೆರಿಗೆ:** ಕಲ್ಯಾಣ ಮಂಟಪಗಳಿಗೆ ವೈಭವ ತೆರಿಗೆ ವಿಧಿಸಿದ್ದರಿಂದ ಮತ್ತು ತೆರಿಗೆ ದರಗಳಲ್ಲಿ ಮಾರ್ಪಾಡು ಹಾಗೂ ಹೊಸ ಹೋಟೆಲ್ ಉದ್ಯಮಗಳ ಸ್ಥಾಪನೆಯಿಂದ ಸಂಗ್ರಹಣೆ ಹೆಚ್ಚಾಗಿದೆ.

6. **ಕೃಷಿ ವರಮಾನ ತೆರಿಗೆ:** ಕಾಫಿ ಬೀಜದ ಬೆಲೆ ಕಡಿಮೆಯಾದುದರಿಂದ ಸಂಗ್ರಹಣೆಯಲ್ಲಿ ಕಡಿಮೆ ಆಗಿದೆ.

7. **ವೃತ್ತಿ ತೆರಿಗೆ:** ಗುತ್ತಿಗೆದಾರರನ್ನು ಮತ್ತು ಸ್ವಯಂ ಉದ್ಯೋಗಿಗಳನ್ನು ವೃತ್ತಿ ತೆರಿಗೆ ವ್ಯಾಪ್ತಿಯಲ್ಲಿ ಸರ್ವೆ ಮಾಡಿ, ನೋಂದಾಯಿಸಿರುವುದರಿಂದ ಸಂಗ್ರಹಣೆ ಹೆಚ್ಚಾಗಿದೆ.

ಇ) ರೂ. 1367. 19 ಕೊಟಿ.

ರೂ. 4855.00 ಕೋಟಿ.

ವಿಷಯ: ದ.ಕನ್ನಡ ಜಿಲ್ಲೆಯ ಪಶುಸಂಗೋಪನಾ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳ ಭರ್ತಿ.

2761 (4174)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳು, ಪಶುವೈದ್ಯ ಪರೀಕ್ಷಕರು, ಪಶುವೈದ್ಯ ಸಹಾಯಕರುಗಳ ಸಂಖ್ಯೆ ಎಷ್ಟು

ಆ) ಈ ಹುದ್ದೆಗಳು ಖಾಲಿ ಇರುವುದರಿಂದ ದೈನಂದಿನ ಪಶುಗಳ ಆರೈಕೆ ಮತ್ತು ಚಿಕಿತ್ಸೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):